





ಅವರವರ ಇಷ್ಟಾನುಸಾರ, ಅವರ ಶಕ್ತಿಯಾನುಸಾರ ನೋಡಿ ಆಯ್ಕೆ ಮಾಡಿಕೊಂಡು ಖರೀದಿಸಿ ಧರಿಸಬಹುದು.

## ಬಣ್ಣ ಬಣ್ಣದ ಬೀಡ್ಸ್

ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಬಣ್ಣ ಬಣ್ಣದ ಬೀಡ್ಸ್ ಇರುವ ಒಡವೆ ಸಹಕಾರಿ. ಅನೇಕ ಮಹಿಳೆಯರು ಬಣ್ಣ ಬಣ್ಣ ಬೀಡ್ಸ್ ಹಾಕಿರುವ ಒಡವೆಗೇ ಆದ್ಯತೆ ನೀಡುತ್ತಾರೆ. ಹೀಗಾಗಿ ಬೀಡ್ಸ್‌ಗಳಲ್ಲಿ ಹಲವಾರು ಶೇಪ್, ಬಣ್ಣ, ವೈವಿಧ್ಯಗಳಿದ್ದು ಹೆಂಗಳೆಯರ ಮನಸೆಳೆಯುತ್ತಿದೆ.

ಎಮರಾಲ್ಡ್, ರೂಬಿ ಬೆಲೆಬಾಳುವ ನವರತ್ನ. ಹಲವಾರು ಬೀಡ್ಸ್, ಓವಲ್ ಶೇಪ್, ಪಿಯರ್ ಶೇಪ್, ರೌಂಡ್ ಶೇಪ್‌ಗಳಲ್ಲಿ ಬರುತ್ತದೆ. ಒಂದೊಂದು ಶೇಪ್‌ನ ಬೀಡ್ಸ್‌ಗಳನ್ನು ಅಳವಡಿಸಿದಾಗಲೂ ಅದು ಒಂದೊಂದು ತರದ ನೋಟವನ್ನು ಬೀರುತ್ತದೆ.

ಯಾವುದೇ ಬೀಡ್ಸ್ ಆಗಲಿ 3 ಎಳೆ ಇದ್ದಾಗ ಚೆನ್ನಾಗಿ ಕಾಣುತ್ತದೆ. 4 ಎಳೆ ಇದ್ದಾಗ ಮತ್ತೂ ಅದ್ಭುತವಾಗಿ ಕಾಣುತ್ತದೆ. ಎಳೆಗಳೂ ಅಷ್ಟೇ ಪ್ರಾಮುಖ್ಯವಾಗಿದೆ. ಜೊತೆಗೆ 4 ಎಳೆಗಳು ಒಂದರ ನಂತರ ಒಂದು ಅಚ್ಚುಕಟ್ಟಾಗಿ ಕಟ್ಟುಗಳಿಂದ ಬಂಧಿಸಿರಬೇಕು. ನುರಿತ ಕುಶಲಕರ್ಮಿಗಳು ಇದನ್ನು ರಚಿಸಿರಬೇಕು. ಜೊತೆಗೆ ದೊಡ್ಡ ಆ್ಯಂಟಿಕ್ ಪೆಂಡೆಂಟ್‌ಗಳೇ ಇದಕ್ಕೆ ಹೊಂದಿಕೊಳ್ಳುತ್ತವೆ.

ಆ್ಯಂಟಿಕ್ ಪೆಂಡೆಂಟ್‌ಗಳು ಹಗುರವಾದದ್ದು, ಭಾರವಾದದ್ದು ಹೇಗೆ ಬೇಕಾದರೂ ತಯಾರು ಮಾಡಬಹುದು. ಡೈಪೀಸ್‌ನಲ್ಲಿ ಮಾಡಿದಾಗ ಹಗುರವಾಗಿ ಇರುತ್ತವೆ. ಹರಳುಗಳು ಅಳವಡಿಸಿದ ಪೆಂಡೆಂಟ್ ಆದರೆ ಭಾರವಾಗಿದ್ದು ಕುತ್ತಿಗೆಯಲ್ಲಿ ಚೋಕರ್ ರೂಪದಲ್ಲಿ ಸರಿಯಾಗಿ ನಿಲ್ಲುವುದು ಕಷ್ಟ. ಹಗುರವಾಗಿದ್ದರೆ ಕುತ್ತಿಗೆಯಲ್ಲಿ ಸುಲಭ ಕೆಲವರಿಗೆ ಸರದ ಭಾರ, ಪೆಂಡೆಂಟ್ ಭಾರ ಹೊಂದಿಕೊಂಡು ಇರುವಂತೆ ನೋಡಿಕೊಂಡು ಕೊಂಡುಕೊಳ್ಳಬೇಕಾಗುತ್ತದೆ. ಒಬ್ಬೊಬ್ಬರ ಶರೀರಕ್ಕೆ ಒಂದೊಂದು ರೀತಿ ಇರುತ್ತದೆ. ಹಾಗಾಗಿ ಚಿನ್ನದ ಚೋಕರ್ ಖರೀದಿಸುವಾಗ ಬ್ಯಾಕ್ ಚೈನ್, ಧೋರಿ, ಪೆಂಡೆಂಟ್, ಎಳೆಗಳ ಸರ ಎಲ್ಲವನ್ನು ಪರಿಶೀಲಿಸಿ ತಮ್ಮ ತಮ್ಮ ಕುತ್ತಿಗೆಗೆ ತೊಂದರೆಯಾಗದಂತೆ ಖರೀದಿಸಬೇಕು. ಚೋಕರ್‌ಗಳಲ್ಲಿ ಕೆಳಗೆ ಮುತ್ತಿನ ರೂಬಿ ಬೀಡ್ಸ್‌ಗಳ ಹ್ಯಾಂಗಿಂಗ್ ಸುಂದರವಾಗಿ ಕಾಣುತ್ತದೆ.

ಈ ಚೋಕರ್‌ಗಳನ್ನು ತೋಳಬಂಧಿಯಾಗಿ ಕೂಡ ಧರಿಸಬಹುದು. ವೈವಿಧ್ಯವಾಗಿ ನಮ್ಮನ್ನು ಕಾಣಲು ಚೋಕರ್ ಸುಂದರ ಅತೀ ಸುಂದರ.

ಕುತ್ತಿಗೆಯಲ್ಲಿ ಚೋಕರ್‌ಗಳು ಎದ್ದು ಕಾಣುತ್ತವೆ. ಇನ್ನು ಸ್ವಲ್ಪ ಗ್ರ್ಯಾಂಡಾಗಿ ಕಾಣಬೇಕಾದರೆ ಒಂದು ಉದ್ದದ ಹಾರಮ್ ಅಥವಾ ಎಳೆ ಎಳೆಯ ಉದ್ದದ ಸರ ಹಾಕಿದಾಗ ಒಂದು ಹೊಸ ನೋಟ ಬರುತ್ತದೆ. ಇಂದು ಸಣ್ಣ ಮಕ್ಕಳಿಗೆ ಆಭರಣದ ಕ್ರೇಜ್ ತುಂಬ ಇದೆ. ಕೊರಳಿಗೆ ಒಂದು ದೊಡ್ಡ 4 ಎಳೆಯ ಚೋಕರ್ ಜೊತೆಗೆ ಅದಕ್ಕೊಪ್ಪುವ ದೊಡ್ಡ ಜುಮುಕಿ, ಕೈ ತುಂಬಾ ಬಳೆ, ಒಂದು ಮೂಗುತಿ ಸಾಕು ಸೌಂದರ್ಯ ಹೆಚ್ಚಿಸಲು. ತಲೆಯ ಕೂದಲನ್ನು ವಿವಿಧ ವಿನ್ಯಾಸದೊಂದಿಗೆ ಜಡೆ, ತುರುಬು ಕಟ್ಟಿದಾಗ ಬಹಳ ವಿನೂತನವಾಗಿ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವೆ. ರೇಷ್ಮೆ ಉದ್ದಲಂಗ ಅದರ ಅಂಚಿನ ಬಣ್ಣಕ್ಕೆ ಹೊಂದುವ ಆಭರಣವಿರುವ ಬಿಳಿ ಮುತ್ತಿನ ಚೋಕರ್ ಎಲ್ಲಾ ಡ್ರೆಸ್‌ಗೂ ಹೊಂದಿಕೊಳ್ಳುತ್ತವೆ.

ಚೋಕರ್‌ಗಳಲ್ಲಿ ಹಿಂಬದಿ ಸಾಧಾರಣ ಬೇಕಾದಂತೆ ಬಿಗಿ ಮಾಡುವ ಅವಕಾಶ ಇರಲಿ. ಸಪೂರ, ಹದವಾದ, ದಪ್ಪಗಿನ ಕುತ್ತಿಗೆ ಇರುವ ಮನೆಯ ಮಂದಿಗೆಲ್ಲಾ ಹಾಕುವಂತಿರಲಿ. ಚೋಕರ್ ಅನ್ನು ಅದರದ್ದೇ ಆದ ಬಾಕ್ಸ್‌ನಲ್ಲಿ ತೆಗೆದಿಡಿ. ನಾಜೂಕಾಗಿ ಬಳಕೆ ಮಾಡಿದರೆ ದೀರ್ಘಕಾಲ ಬಾಳಿಕೆ ಬರುತ್ತದೆ.